



ಸಂಪಾದಕೀಯ

‘ಧೈರ್ಯಂ ಸರ್ವತ್ರ ಸಾಧನಂ’

ಜೀವನದ ಜಂಜಾಟಗಳಿಂದ ಮುಕ್ತರಾಗಲು ಆತ್ಮಹತ್ಯೆಯೊಂದೇ ಮಾರ್ಗ ಎಂದು ಅಂದುಕೊಂಡವರು ಈ ಹಾದಿ ತುಳಿಯುತ್ತಾರೆ. ‘ಈಸಬೇಕು ಇದ್ದು ಜೈಸಬೇಕು’ ಎಂಬ ಧೈರ್ಯದ ಮಾತುಗಳು ಘಾಸಿಮಾಡಿಕೊಂಡವರ ಮನಸ್ಸಿಗೆ ನಾಟುವುದೇ ಇಲ್ಲ. ಆದ್ದರಿಂದಲೇ ಆತ್ಮಹತ್ಯೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಏರುಮುಖವಾಗಿಯೇ ಮುಂದುವರಿಯುತ್ತಿವೆ. ಸೆಪ್ಟೆಂಬರ್ 10ನ್ನು ವಿಶ್ವ ಆತ್ಮಹತ್ಯೆ ತಡೆ ದಿನ (ವಿರೋಧಿ ದಿನ) ಎಂದು ಪ್ರಪಂಚಾದ್ಯಂತ ಆಚರಿಸಲಾಯಿತು. ಆದರೆ ಇದು ಮತ್ತೊಂದು ಆಚರಣೆಯಂತಾಗಬಾರದು ಹಲವರ ಅನಿಸಿಕೆ. ಐದಾರು ದಶಗಳಷ್ಟು ಹಿಂದೆ ಹೋದರೆ ನಮ್ಮ ದೇಶದಲ್ಲಿ ಆತ್ಮಹತ್ಯೆ ಪ್ರಕರಣಗಳು ಹುಬ್ಬೇರಿಸುವ ಮಟ್ಟಿಗೆ ಇರಲಿಲ್ಲ. ಇದಕ್ಕೆ ಸಾಕಷ್ಟು ಕಾರಣಗಳು ಇವೆ. ವಿಜ್ಞಾನ, ತಂತ್ರಜ್ಞಾನ ಹೆಚ್ಚುತ್ತಿದ್ದಂತೆ, ಜೀವನ ಮಟ್ಟವು ಸುಧಾರಿಸುತ್ತಾ ಹೋದಂತೆ, ಆಸೆ ದುರಾಸೆಯತ್ತ ವಾಲುತ್ತಿದ್ದಂತೆ, ಸಾಲ ಮಾಡುವಾಗ ಇರುವ ಧೈರ್ಯ ಸಾಲ ತೀರಿಸಲಾಗದೆ ಹತಾಶ ಸ್ಥಿತಿಗೆ ಹೋಗುತ್ತಿದ್ದಂತೆ ನೊಂದ ಮನಸ್ಸು ಕಂಡ ಏಕೈಕ ದಾರಿಯೆಂದರೆ ಆತ್ಮಹತ್ಯೆ. ಮನಸ್ಸು ದುರ್ಬಲವಾದಾಗಲೇ ಆತ್ಮಹತ್ಯೆಯ ಯೋಚನೆ ಬರುತ್ತದೆ ಎಂಬುದನ್ನ ಅರಿತೇ, ಇತ್ತೀಚಿನ ವರ್ಷಗಳಲ್ಲಿ ಮನೋವಿಜ್ಞಾನ ಕ್ಷೇತ್ರ ಬೆಳೆಯುತ್ತಿದ್ದಂತೆ ಮನೋವಿಜ್ಞಾನಿಗಳ ಸಂಖ್ಯೆಯು ಹೆಚ್ಚುತ್ತಿದೆ. ಆಪ್ತ ಸಮಾಲೋಚನೆ ಮೂಲಕ ಮನಸ್ಸನ್ನು ಸಕಾರಾತ್ಮಕವಾಗಿ ತಿರುಗಿಸುವ ಯತ್ನಗಳು ಸಾಗುತ್ತಿದ್ದರೂ ಪರಿಣಾಮ ನಿರೀಕ್ಷಿತ ಮಟ್ಟದ್ದಾಗಿಲ್ಲ ಎಂಬ ಮಾತುಗಳು ಕೇಳಿಬರುತ್ತಿದೆ. ಇತ್ತೀಚೆಗೆ ಬಹುತೇಕರನ್ನು ತೀವ್ರವಾಗಿ ಕಾಡಿದ್ದು ಉದ್ಯಮಿ ಸಿದ್ಧಾರ್ಥ ಅವರ ಆತ್ಮಹತ್ಯೆ. ಕಾಫಿ ತೋಟಗಳ ಒಡೆಯನಿಗೆ ಸಣ್ಣವಯಸ್ಸಿನಿಂದಲೂ ಬೆನ್ನೆಲುಬಾಗಿದ್ದ ತಂದೆ(ಈಗ ಅವರು ತೀರಿಕೊಂಡಿದ್ದಾರೆ). ನಂತರ ಸಮಾಜದಲ್ಲಿ ಗಣ್ಯಾತಿಗಣ್ಯರಾಗಿರುವ ಮಾವ. ಕಣ್ಣಿಗೆ ಕಾಣುವ ಆಸ್ತಿ-ಅಂತಸ್ತು ಜತೆಗೆ ಮನಸ್ಸಿನ ಗೊಂದಲ ಪರಿಹರಿಸುವ ಶಕ್ತಿಯಿರುವವರೆನ್ನಲಾದ ವ್ಯಕ್ತಿಗಳು ಇದ್ದರೂ ಯಾವುದೂ ಪ್ರಯೋಜಕ್ಕೆ ಬರಲಿಲ್ಲ. ಎಲ್ಲರೂ ಇದ್ದರೂ ಯಾರು ಇಲ್ಲವೇನೋ ಎಂಬ ವ್ಯಕ್ತಿಯಂತೆ ನದಿಗೆ ಹಾರಿ ಇಹಲೋಕವನ್ನು ತ್ಯಜಿಸಿದರು. ತಮ್ಮ ಉಪನ್ಯಾಸಗಳಲ್ಲಿ ಆತ್ಮಬಲ ಹೆಚ್ಚಿಸಿಕೊಳ್ಳಬೇಕೆಂದು ಹೇಳುತ್ತಿದ್ದ ಇವರ ಮನಸ್ಸೇ ದುರ್ಬಲವಾಗಿದ್ದಾದರೂ ಹೇಗೆ? ಆಪ್ತ ಸಮಾಲೋಚನೆಯೂ ಫಲ ನೀಡುವುದಿಲ್ಲ ಎಂದು ಭಾವಿಸಿಕೊಂಡೇ ತಮ್ಮ ‘ನಿರ್ಧಾರ’ಕ್ಕೆ ಅಂಟಿಕೊಂಡರೆ? ಮನೋವಿಜ್ಞಾನಿಗಳಿಗೆ ಇದು ಅಧ್ಯಯನಕ್ಕೆ, ಮನದಲ್ಲಿ ಯಾವುದೇ ಸಂಶಯ ಇಟ್ಟುಕೊಳ್ಳದೆ ಮನಬಿಚ್ಚಿ ಮಾತನಾಡಿ ಎಂದು ತಮ್ಮ ಬಳಿ ಬರುವವರಿಗೆ ಹೇಳುವುದಕ್ಕೆ ಉದಾಹರಣೆಯಾಗಬಹುದು. ಗಟ್ಟಿ ಮನಸ್ಸು, ಧೈರ್ಯಂ ಸರ್ವತ್ರ ಸಾಧನಂ’ ಎಂಬ ಧ್ಯೇಯವಾಕ್ಯ, ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು, ಆಸೆ ಇರಲಿ, ಅತಿ ಆಸೆ ಬೇಡ ಎಂಬುದನ್ನು ಅರಿತು ಸಾಗುವವರಿಗೆ ಆತ್ಮಹತ್ಯೆಯ ಚಿಂತೆ ಮೂಡದು. ಹಾಗೆಯೇ ಅಪಹಾಸ್ಯ, ವಿನಾಕಾರಣ ನಿಂದನೆ, ಕುಚೋದ್ಯದ ಮಾತುಗಳು ಕಡಿಮೆಯಾಗಬೇಕು.

ಏನೇ ಆಗಲಿ, ನಮ್ಮ ಸರಕಾರಗಳು ಹಾಗೂ ಸಮಾಜ ಆತ್ಮಹತ್ಯೆಯ ಈ ಪಿಡುಗನ್ನು ಗಂಭೀರವಾಗಿ ಪರಿಗಣಿಸಬೇಕು. ಎಲ್ಲ ಸಮಸ್ಯೆಗಳಿಗೂ ಆತ್ಮಹತ್ಯೆಯೇ ಪರಿಹಾರ ಎಂಬ ಮನೋಭಾವ ಸಾರ್ವತ್ರಿಕಗೊಳ್ಳುವಂಥ ಅಪಾಯದ ಸನ್ನಿವೇಶ ಎದುರಾಗುವ ಮುನ್ನ ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕು. ಇದಕ್ಕೊಂದು ಪರಿಹಾರ ಕಂಡುಹಿಡಿಯಬೇಕು.

ಚಿತ್ರಸ್ಫೂರ್ತಿ

ಇತರರ ಮನಸ್ಸೆಂದರೆ ಪೂರ್ಣ ಚಾರಣ ಎಂದಿಗೂ ಸಾಧ್ಯವಾಗದ ವಿದೇಶಿ ಭೂಮಿಯಂತೆ!

ತಿಳಿಸಾರ

ಕ್ಯಾಮೆರಾ ನಿರೀಕ್ಷಣೆಗೊಳಪಟ್ಟಿರುವ ವಿಶ್ವ

- ತೀವ್ರ ಕ್ಯಾಮೆರಾ ನಿಗಾಕ್ಕೆ ಒಳಪಟ್ಟಿರುವ ಪ್ರಪಂಚದ 10 ನಗರಗಳಲ್ಲಿ 8 ಚೀನಾದಲ್ಲಿವೆ.
- 1000 ಜನರನ್ನು ವೀಕ್ಷಿಸಲು ಗರಿಷ್ಠ ಸಂಖ್ಯೆಯಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುವ ನಗರಗಳೆಂದರೆ,

ಚಾಂಗ್‌ಚಿಂಗ್-168
ಶೆನ್‌ಝೆನ್- 159.1
ಶಾಂಘಾಯ್- 113.5
ಟಿಯಾನ್ಜಿನ್- 92.9
ಜಿನಾನ್- 73.8
ಲಂಡನ್- 68.4

- ನಗರಗಳಲ್ಲಿ ಅಳವಡಿಸಲಾಗಿರುವ ಸರ್ವೈಲೆನ್ಸ್-ನಿಯಂತ್ರಕ ಕ್ಯಾಮೆರಾಗಳು ಅಪರಾಧ ಪ್ರಕರಣಗಳನ್ನು ಭೇದಿಸುವಲ್ಲಿ ಸಹಕಾರಿಯಾಗಿವೆ.
- ಉಪಗ್ರಹ ಕ್ಯಾಮೆರಾಗಳು ಚಂಡಮಾರುತ ಮುನ್ಸೂಚನೆ, ಸಂರಕ್ಷಿತ ಅರಣ್ಯಪ್ರದೇಶಗಳಲ್ಲಿ ನಡೆಯುವ ಕಳ್ಳಬೇಟೆ ಮುಂತಾದ ಅಕ್ರಮಗಳ ಪತ್ತೆಗೆ ಸಹಕಾರಿಯಾಗಿವೆ.
- ಬಹುತೇಕ ನಾಗರಿಕರು ವಿಶ್ವದೆಲ್ಲೆಡೆ ಕ್ಯಾಮೆರಾಗಳ ವೀಕ್ಷಣೆಗೆ ತುತ್ತಾಗುವುದರಿಂದ ಸಂಗ್ರಹಿಸಿದ ಮಾಹಿತಿ ದುರುಪಯೋಗವಾಗುವ ಸಾಧ್ಯತೆ ಈ ವ್ಯವಸ್ಥೆಯಲ್ಲಿನ ಕಳವಳಕಾರಿ ಅಂಶ.

ಕಾಕಾ ಹೋಟ್ಲು

ಆರೋಗ್ಯ ಸಚಿವರು ಆಸ್ಪತ್ರೆಯಲ್ಲಿ ವಾಸ್ತವ್ಯ ಹೂಡುತ್ತಾರಂತೆ?

ಧೀರು

....

ಸುಧೀರು

ವಾಸ್ತವ ಅರಿಯುವ ಪ್ರಯತ್ನವಿರಬೇಕು!

ಉಗ್ರಪ್ಪ ಎಂಬ ರಾಜಕಾರಣದ ಅಸಹ್ಯಕರ ಶಬ್ದಮಾಲಿನ್ಯ!

ಬೇಟೆ

ಜಯವೀರ ವಿಕ್ರಮ್ ಸಂಪತ್ ಗೌಡ

ಅಂಕಣಕಾರರು

ಮನುಷ್ಯನಿಗೆ ಮಾತೇ ವ್ಯಕ್ತಿತ್ವ. ‘ಮಾತೇ ಮಾಣಿಕ್ಯ’ ಎಂದು ಭಾವಿಸಿದ ಸಂಸ್ಕೃತಿ ನಮ್ಮದು. ಮಾತು ಬೇರೆ ಅಲ್ಲ, ಮನುಷ್ಯ ಬೇರೆ ಅಲ್ಲ. ಆದರೆ ಈ ಮಾತು ನಮ್ಮ ರಾಜಕಾರಣಿಗಳಿಗೆ ಅನ್ವಯಿಸುವುದಿಲ್ಲ. ಹಾಗಾದರೆ ರಾಜಕಾರಣಿಗಳು ಮನುಷ್ಯರು ಅಲ್ಲವಾ ಎಂಬುದು ಬೇರೆ ಮಾತು. ರಾಜಕಾರಣಿಗಳ ಮಾತಿಗೂ, ನಡೆಗೂ, ವ್ಯಕ್ತಿತ್ವಕ್ಕೂ ಸಂಬಂಧವೇ ಇಲ್ಲ. ‘ನನ್ನ ಮಾತುಗಳೇ ನಾನು’ ಎಂಬುದನ್ನು ಇಡೀ ಸಮಾಜವೇ ಒಪ್ಪಿಕೊಂಡರೂ, ರಾಜಕಾರಣಿಗಳು ಮಾತ್ರ ಒಪ್ಪಿಕೊಳ್ಳುವುದಿಲ್ಲ. ತಮ್ಮ ಮಾತುಗಳಿಂದ ತಮ್ಮ ವ್ಯಕ್ತಿತ್ವ ನಿರ್ಧಾರಿತವಾಗುತ್ತದೆ ಎಂಬುದನ್ನು ಅವರು ಗಂಭೀರವಾಗಿ ಪರಿಗಣಿಸುವುದಿಲ್ಲ. ಹೀಗಾಗಿ ಬೇಕಾಬಿಟ್ಟಿ ಮಾತಾಡಿ ತಮ್ಮ ವ್ಯಕ್ತಿತ್ವ ಕೆಡಿಸಿಕೊಂಡು ಜನರ ಕಣ್ಣಲ್ಲಿ ಸಣ್ಣವರಾಗುತ್ತಾರೆ.

‘ಆರೋಪ ಸಾಬೀತಾದರೆ ರಾಜೀನಾಮೆ’ ಎಂದು ನೂರಾರು ರಾಜಕಾರಣಿಗಳು ಹೇಳಿರಬಹುದು. ಆದರೆ ಇಲ್ಲಿ ತನಕ ಒಬ್ಬನೂ ನುಡಿದಂತೆ ನಡೆದಿದ್ದನ್ನು ನಾನಂತೂ ನೋಡಿಲ್ಲ. ‘ಆರೋಪ ಸಾಬೀತಾದರೆ ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ’ ಎಂಬುದೂ ಹಳೇ ವರಸೆಯೇ. ಆದರೆ ಇಲ್ಲಿಯವರೆಗೆ ಒಬ್ಬನೇ ಒಬ್ಬ ರಾಜಕಾರಣಿಯೂ ರಾಜಕೀಯ ಸನ್ಯಾಸ ಸ್ವೀಕರಿಸಿದ್ದನ್ನು ಯಾರೂ ನೋಡಿಲ್ಲ. ‘ನರೇಂದ್ರ ಮೋದಿ ಎರಡನೆ ಬಾರಿ ಪ್ರಧಾನಿಯಾದರೆ ನಾನು ರಾಜಕೀಯ ಸನ್ಯಾಸ ಸ್ವೀಕರಿಸುವೆ’ ಎಂದು ದೇವೇಗೌಡರ ಪುತ್ರ, ಅಂದಿನ ಸಚಿವ ಎಚ್.ಡಿ. ರೇವಣ್ಣ ಅಂದು ಚುನಾವಣೆ ಸಂದರ್ಭದಲ್ಲಿ ಹೇಳಿದ್ದರು. ಚುನಾವಣೆ ಮುಗಿಯಿತು, ಮೋದಿ ಎರಡನೇ ಬಾರಿ ಪ್ರಧಾನಿಯೂ ಆದರು. ಆದರೆ ರೇವಣ್ಣ ಮಾತ್ರ ಹೇಳಿದ ಮಾತನ್ನು ಇನ್ನೂ ಈಡೇರಿಸಿಲ್ಲ. ತಮ್ಮ ಮಾತಿಗೆ ತಾವೇ ಕಿಮ್ಮತ್ತು ಕೊಡದಿದ್ದರೆ, ಇನ್ಯಾರು ಕೊಡುತ್ತಾರೆ ಎಂಬ ಕನಿಷ್ಠ ಜ್ಞಾನವೂ ರೇವಣ್ಣಂಗೆ ಇಲ್ಲದೇ ಹೋಯಿತಾ? ರೇವಣ್ಣ ರಾಜಕೀಯ ಸನ್ಯಾಸ ಸ್ವೀಕರಿಸಲಿ ಎಂಬ ಇರಾದೆ ಯಾರಿಗೂ ಇರಲಿಲ್ಲ. ಆದರೆ ಅವರೇ ಆ ಮಾತುಗಳನ್ನು ಹೇಳಿ ತಮ್ಮ ವ್ಯಕ್ತಿತ್ವಕ್ಕೆ ಕುಂದು ತಂದುಕೊಂಡರು.

‘ಈ ಜನ್ಮದಲ್ಲೂ ಮತ್ತೊಮ್ಮೆ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗೊಲ್ಲ, ಒಂದು ವೇಳೆ ಆದರೆ ನಾನು ಅವರ ಮನೆಯಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತೇನೆ’ ಎಂದು ಕುಮಾರಸ್ವಾಮಿಯ ಸಂಪುಟದಲ್ಲಿ ಸಚಿವರಾಗಿದ್ದ ಜಮೀರ್ ಅಹಮದ್ ಹೇಳಿದ್ದರು. ಯಡಿಯೂರಪ್ಪನವರು ಮುಖ್ಯಮಂತ್ರಿಯಾದರು. ಕೇವಲ ಎರಡು ವಾರಗಳ ಹಿಂದೆ ಹೇಳಿದ ಮಾತನ್ನು ಜಮೀರ್ ಮರೆಯಲು ಸಾಧ್ಯವಿರಲಿಲ್ಲ. ಅಲ್ಲದೇ ಎಲ್ಲ ಟಿವಿ ಚಾನೆಲ್‌ಗಳು, ಪತ್ರಿಕೆಗಳು ‘ಜಮೀರ್, ನೀವು ಒಂದು ದಿನದ ಮಟ್ಟಿಗೆ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡ್ತೀನಿ ಅಂತ ಹೇಳಿದ್ದಿರಿ’ ಎಂದು ನೆನಪಿಸಿದವು. ಸೋಶಿಯಲ್ ಮೀಡಿಯಾದಲ್ಲಂತೂ ಜಮೀರ್ ಟ್ರೋಲ್ ಆದರು. ಅವರು ತಮ್ಮ ಮಾತನ್ನು ಮರೆತವರಂತೆ ಸುಮ್ಮನಿದ್ದರು. ಬೇರೆಯವರು ಕೊಡುವುದು ದೂರವೇ ಉಳಿಯಿತು, ಜಮೀರ್ ತಮ್ಮ ಮಾತಿಗೆ ತಾವೇ ಕಿಮ್ಮತ್ತು ಕೊಡಲಿಲ್ಲ. ಮುಂದೆ ಈ ನಾಯಕರ ಮಾತುಗಳನ್ನು ಯಾರು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ? ನಾಚಿಕೆ, ಮಾನ-ಮರ್ಯಾದೆ ಇಲ್ಲದವರು!

ಸಾರ್ವಜನಿಕ ಜೀವನದಲ್ಲಿ ಇರುವವರು ಒಂದು ಮಾತನ್ನಾಡುವಾಗ ಹತ್ತು ಸಲ ಯೋಚಿಸಬೇಕು. ಬೇರೆಯವರ ಬಗ್ಗೆ ಮಾತಾಡುವಾಗಂತೂ ಚೆನ್ನಾಗಿ ಯೋಚಿಸಬೇಕು. ಅನ್ಯರ ಬಗ್ಗೆ ಮಾತಾಡುವಾಗ ಒಂದು ತೂಕ, ಹದ ಇಲ್ಲದಿದ್ದರೆ, ಹಾಗೆ ಮಾತಾಡುವವರನ್ನು ಎಲ್ಲರೂ ಲಘುವಾಗಿಯೇ ಪರಿಗಣಿಸುತ್ತಾರೆ. ಆ ಮೂಲಕ ಅವರು ತಮ್ಮ ಘನತೆಯನ್ನು ತಾವೇ ಕಳೆದುಕೊಳ್ಳುತ್ತಾರೆ. ಜನರ ಕಣ್ಣಲ್ಲಿ ಸಣ್ಣವರಾಗಿ ಕಾಣುತ್ತಾರೆ. ತಮ್ಮ ರಾಜಕೀಯ ವಿರೋಧಿಗಳ ಬಗ್ಗೆ ಮಾತಾಡುವಾಗ ಗೌರವ, ಸಂಯಮ, ಮರ್ಯಾದೆಯ ಎಲ್ಲೆ ಮೀರಬಾರದು ಎಂಬ ಸಾಮಾನ್ಯ ಸಂಗತಿಯೂ ಗೊತ್ತಿರುವುದಿಲ್ಲ. ಎರಡು ಬಾರಿ ಮುಖ್ಯಮಂತ್ರಿಯಾದ ಕುಮಾರಸ್ವಾಮಿಯಂಥ ನಾಯಕರೂ ಉಡಾಫೆಯಿಂದ ಮಾತಾಡುವುದನ್ನು ಕೇಳಿರಬಹುದು. ತಮ್ಮ ರಾಜಕೀಯ ಪ್ರತಿಸ್ಪರ್ಧಿಗಳ ಬಗ್ಗೆ ವಿರೋಧವಿರಲಿ, ತಪ್ಪೇನಿಲ್ಲ. ಆದರೆ ಅನಾದರ, ಅಗೌರವ ಬೇಡವೇ ಬೇಡ. ನಾಲಗೆ ನಿಯಂತ್ರಣವಿಲ್ಲದ ನಾಯಕ, ಯಾರ ಮೇಲೂ ನಿಯಂತ್ರಣವನ್ನು ಇಟ್ಟುಕೊಳ್ಳಲಾರ, ಅದಕ್ಕಿಂತ ಹೆಚ್ಚಾಗಿ ಬಹುಬೇಗ ಜನರ ಕಣ್ಣಲ್ಲಿ ಸಣ್ಣವನಾಗುತ್ತಾನೆ.

ಉದಾಹರಣೆಗೆ, ನಾಲ್ಕು ತಿಂಗಳ ಲೋಕಸಭಾ ಸದಸ್ಯ ವಿ.ಎಸ್. ಉಗ್ರಪ್ಪ. ಈ ಮನುಷ್ಯ ಮೈಮೇಲೆ, ಬುದ್ಧಿಮೇಲೆ ಪರಿವೆ ಇಲ್ಲದಂತೆ ಮಾತಾಡುತ್ತಾರೆ. ಮೊದಲೇ ಕೆಟ್ಟ ಸ್ವರ, ಬಾಯಿ ತೆರೆದರೆ ಕರ್ಕಶ. ತನ್ನ ರಾಜಕೀಯ ಪ್ರತಿಸ್ಪರ್ಧಿಗಳ ಬಗ್ಗೆ ಲಘುವಾಗಿ, ಹಗುರವಾಗಿ ಮಾತಾಡುತ್ತಾರೆ. ಮಾತಿನಲ್ಲಿ ಯಾವುದೇ ಹುರುಳಾಗಲಿ, ತಿರುಳಾಗಲಿ ಇರುವುದಿಲ್ಲ. ಆದರೂ ವಟವಟ ಅಂತ ಬಡಬಡಿಸುತ್ತಾರೆ. ಟಿವಿ ಸ್ಟುಡಿಯೋದಲ್ಲಿ ಕುಳಿತರೆ ಇವರು ಬೇರೆ ಯಾರಿಗೂ ಮಾತಾಡಲು ಬಿಡುವುದಿಲ್ಲ. ತಾನೊಂದು ಖಾಲಿ ಕೊಡ ಎಂಬುದನ್ನು ಪದೇಪದೆ ಸಾಬೀತು ಮಾಡುತ್ತಾರೆ. ಇವರ ಮಾತನ್ನು ಅವರ ಪಕ್ಷದವರೇ ಗಂಭೀರವಾಗಿ ಪರಿಗಣಿಸುವುದಿಲ್ಲ. ಇತ್ತೀಚೆಗೆ ಕಾಂಗ್ರೆಸ್ ನಾಯಕರಿದ್ದ ಸಭೆಯಲ್ಲಿ ಧ್ವನಿವರ್ಧಕ ಕೈಕೊಟ್ಟಿತು. ವೇದಿಕೆಯಲ್ಲಿದ್ದ ನಾಯಕರೊಬ್ಬರು, ‘ಮೈಕ್ ಸರಿ ಹೋಗುವ ತನಕ ಉಗ್ರಪ್ಪ ಮಾತಾಡಲಿ’ ಎಂದು ಸಲಹೆ ನೀಡಿದರಂತೆ. ಇಷ್ಟು ಸಾಕಾ ಅವರ ಮುಖಕ್ಕೆ?! ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ಸೋಲುವಂಥ ಹೀನಾಯ ಸ್ಥಿತಿ ತಂದುಕೊಂಡ ಅವರ ವ್ಯಕ್ತಿತ್ವವನ್ನು ಬಳ್ಳಾರಿ ಲೋಕಸಭಾ ಕ್ಷೇತ್ರದ ಮತದಾರರು ಅಳೆದರು. ಮತ್ಯಾರೂ ಅಲ್ಲ, ಅವರ ಮೊದಲ ಶತ್ರು ಅವರ ಬಾಯಿ, ಅವರ ಮಾತು.

ಇತ್ತೀಚೆಗೆ ಕೆಪಿಸಿಸಿ ಕಚೇರಿಯಲ್ಲಿ ಉಗ್ರಪ್ಪ, ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಬಗ್ಗೆ ಮಾತಾಡಿದರು. ವಿಧಾನಸಭೆಯಲ್ಲಿ ಬ್ಲ್ಯೂಫಿಲಂ ನೋಡಿದ್ದು ದೇಶದ್ರೋಹವಲ್ಲ ಎನ್ನುವ ಬಿಜೆಪಿ ಸರಕಾರದ ಸಚಿವರು, ಮುಂದಿನ ದಿನಗಳಲ್ಲಿ ಬಸ್‌ಸ್ಟ್ಯಾಂಡಿನಲ್ಲಿ ಸಾರ್ವಜನಿಕವಾಗಿ ಬ್ಲ್ಯೂಫಿಲಂ ತೋರಿಸಿದರೂ ಅಚ್ಚರಿಯಿಲ್ಲ ಎಂದು ವ್ಯಂಗ್ಯವಾಡಿದರು. ಸವದಿ ಸದನದಲ್ಲಿ ಬ್ಲ್ಯೂಫಿಲಂ ನೋಡಿದರೆನ್ನಲಾದ ಪ್ರಕರಣ ಸುಮಾರು ಆರೆಂಟು ವರ್ಷಗಳಷ್ಟು ಹಳೆಯದು. ಅದನ್ನು ರಾಜ್ಯದ ಜನತೆ ಮರೆತುಬಿಟ್ಟಿದ್ದಾರೆ. ಆದರೆ ಉಗ್ರಪ್ಪನವರ ಮನಸ್ಸಿನಲ್ಲಿ ಮಾತ್ರ ಇನ್ನೂ ನೀಲಿಚಿತ್ರವೇ ಇದೆ. ಸವದಿಯವರು ಸದನದಲ್ಲಿ ಅದನ್ನು ನೋಡಬಾರದಿತ್ತು. ಆದರೆ ಆಕಸ್ಮಿಕವಾಗಿ ನೋಡಿಬಿಟ್ಟರು. ಅದಕ್ಕೆ ಪ್ರಾಯಶ್ಚಿತವಾಗಿ ರಾಜೀನಾಮೆಯನ್ನೂ ಕೊಟ್ಟರು. ಅಲ್ಲಿಗೆ ಆ ಕತೆ ಮುಗಿಯಿತು. ಅದೊಂದು ತೀರಾ ಆಕಸ್ಮಿಕ, ದುರ್ದೈವ, ಅನಪೇಕ್ಷಿತ ಘಟನೆ. ಅಲ್ಲಿ ಆ ಚಿತ್ರವನ್ನು ನೋಡಬಾರದು ಎಂಬ ವಿವೇಕ ಸವದಿ ಅವರಿಗೆ ಖಂಡಿತವಾಗಿಯೂ ಇತ್ತು, ಇದೆ. ಆದರೆ ಅವರಿಂದ ಆದ ಪ್ರಮಾದ ತೀರಾ ಆಕಸ್ಮಿಕ. ಅದು ಕ್ಷಮಾರ್ಹವಲ್ಲದ ಅಪರಾಧವೇನಲ್ಲ. ಸದನದಲ್ಲಿ ಬಿಡಿ, ಬೇರೆಲ್ಲೂ ಉಗ್ರಪ್ಪನವರು ಬ್ಲ್ಯೂಫಿಲಂ ನೋಡಿಯೇ ಇಲ್ಲವಾ? ಅದನ್ನು ನೋಡಿದವರು ಜಗತ್ತಿನಲ್ಲಿ ಸವದಿ ಅವರೊಬ್ಬರೇನಾ? ತಕರಾರು ಇರುವುದು ಅವರು ನೋಡಿದ ಜಾಗದ ಬಗ್ಗೆ ತಾನೇ? ಅದಕ್ಕಾಗಿ ಸವದಿಯವರು ಪ್ರಾಯಶ್ಚಿತ ಮಾಡಿಕೊಂಡಿದ್ದಾರೆ. ಎಲ್ಲ ಪ್ರಮಾದಗಳಿಗೂ ಕ್ಷಮೆ, ಪ್ರಾಯಶ್ಚಿತ್ತವಿದೆ. ಸವದಿ ಅವರು ಆ ಪಾಪದಿಂದ ಈಗ ಪ್ರಾಯಶ್ಚಿತ್ತ ಮಾಡಿಕೊಂಡು ಹೊರಬಂದಿದ್ದಾರೆ, ಸ್ವಚ್ಛವಾಗಿದ್ದಾರೆ.

ಆದರೆ ಇನ್ನೂ ಗಲೀಜಾಗಿರುವವರು ಉಗ್ರಪ್ಪನವರು. ತಮ್ಮ ಮಾತಿನ ಮೂಲಕ ತಮ್ಮ ಮನಸ್ಥಿತಿ ಎಷ್ಟು ಕೊಳಕು, ಅಸಹ್ಯವಾಗಿದೆಯೆಂಬುದನ್ನು ಉಗ್ರಪ್ಪನವರು ಪ್ರದರ್ಶಿಸಿದ್ದಾರೆ. ‘ರಾಜ್ಯದ ಜನತೆಗೆ ಸವದಿಯವರು ಬಸ್‌ಸ್ಟ್ಯಾಂಡಿನಲ್ಲಿ ಸಾರ್ವಜನಿಕವಾಗಿ ಬ್ಲ್ಯೂಫಿಲಂ ತೋರಿಸಬಹುದು’ ಎಂದು ಲಘುವಾಗಿ ಮಾತಾಡುವಾಗ, ತಾವು ರಾಜ್ಯದ ಜನರನ್ನು ಎಷ್ಟು ಉದಾಸೀನ, ಕೇವಲವಾಗಿ ಪರಿಗಣಿಸಿ ಅವರಿಗೆ ಅವಮರ್ಯಾದೆ ಮಾಡುತ್ತಿದ್ದೇವೆಂಬ ಕನಿಷ್ಠ ಜ್ಞಾನವೂ ಇರಲಿಲ್ಲವಾ? ತಾನು ಅವಮಾನಿಸುತ್ತಿರುವುದು ಸವದಿ ಅವರನ್ನಲ್ಲ, ರಾಜ್ಯದ ಜನತೆಯನ್ನು ಎಂದು ಅವರಿಗೆ ಅನಿಸಲಿಲ್ಲವಾ? ಬಸ್‌ಸ್ಟ್ಯಾಂಡಿನಲ್ಲಿ ಬ್ಲ್ಯೂಫಿಲಂ ನೋಡುವುದು ನಮ್ಮ ಜನರ ಸಂಸ್ಕೃತಿಯಾ? ಮಾತಾಡುವುದಕ್ಕೂ ಒಂದು ಮಿತಿ, ಸಂಯಮ, ನಿಯಂತ್ರಣ, ಗೌರವ ಬೇಕಲ್ಲವಾ? ತಾನು ರಾಜ್ಯದ ಉಪಮುಖ್ಯಮಂತ್ರಿ ಸ್ಥಾನದಲ್ಲಿರುವ ವ್ಯಕ್ತಿ ಬಗ್ಗೆ ಮಾತಾಡುತ್ತಿದ್ದೇನೆಂಬ ಕನಿಷ್ಠ ತಿಳಿವಳಿಕೆ, ವಿವೇಚನೆಯೂ ಉಗ್ರಪ್ಪನವರಿಗೆ ಇಲ್ಲವಾ? ಸವದಿಯವರನ್ನು ವ್ಯಂಗ್ಯಮಾಡುವ ಭರದಲ್ಲಿ ರಾಜ್ಯದ ಜನತೆಯ ಮರ್ಯಾದೆ, ಸಂಪನ್ನತೆಯನ್ನು ಹರಾಜು ಹಾಕುತ್ತಿದ್ದೇನೆಂಬ ಸಾಮಾನ್ಯ ಬುದ್ಧಿಯೂ ಉಗ್ರಪ್ಪಗೆ ಇಲ್ಲದಾಯಿತಾ?

ಉಗ್ರಪ್ಪ ನಮ್ಮ ರಾಜ್ಯರಾಜಕಾರಣದ ಅತಿ ಅಸಹ್ಯಕರ ಶಬ್ದಮಾಲಿನ್ಯ! ಅವರು ರಂಧ್ರಗಳನ್ನೆಲ್ಲ ಬಾಯಿ ಎಂದು ಭಾವಿಸಿದಂತಿದೆ. ಅದಕ್ಕಾಗಿ ಅವರ ಮಾತುಗಳು ಅಷ್ಟು ಹೊಲಸಾಗಿರುತ್ತವೆ. ಈ ಕಟು ಸಂಗತಿ ಅವರಿಗೆ ಗೊತ್ತಾಗಲಿ ಎಂದೇ ನೇರಾನೇರ ಹೇಳಿದ್ದೇನೆ. ಅವರು ಆಡುವುದು ಮಾತುಗಳಲ್ಲ, ಬರೀ ಹೊಲಸು ಎಂಬುದು ಜನರಿಗೆ ಗೊತ್ತಾಗಲಿ. ನಾಲ್ಕು ಜನ್ಮಕ್ಕೆ ಸಾಕಾಗುವಷ್ಟು ಈ ಜನ್ಮದಲ್ಲೇ ಮಾತಾಡಿರುವ ಉಗ್ರಪ್ಪನವರಿಗೆ ಮೌನದ ಮಹತ್ವ ಅರಿವಾಗಲಿ. ಅವರ ಬಾಯಿ ಅಂದ್ರೆ ಪಾಲಿಕೆ ತೊಟ್ಟಿ ಎಂಬುದು ಗೊತ್ತಿದೆ. ಆದರೂ ಅದನ್ನು ಅವರೇ ಪ್ರೂವ್ ಮಾಡುವುದು ಬೇಡ.

ಅಷ್ಟಕ್ಕೂ ಉಗ್ರಪ್ಪನವರಿಗೆ ತಮ್ಮ ಪಕ್ಷದ ನಾಯಕರು ಎಂಥವರು ಎಂಬುದು ಗೊತ್ತಿಲ್ಲವಾ? ಅವರ ಗುಣಕಥನಗಳ ಬಗ್ಗೆ ಅರಿವಿಲ್ಲವಾ? ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಅಭಿಷೇಕ ಮನು ಸಿಂಘ್ವಿ, ಸುರ್ಜೇವಾಲ ಅವರ ರಾಸಲೀಲೆಗಳು ಬ್ಲ್ಯೂಫಿಲಂಗಳನ್ನೂ ನಾಚಿಸುವಂತಿದ್ದವು. ಕಾಂಗ್ರೆಸ್ ಸರಕಾರದಲ್ಲಿ ಸಚಿವರಾಗಿದ್ದ ಎಚ್.ವೈ.ಮೇಟಿಯವರು ಯಾವ ಕಾರಣಕ್ಕೆ ರಾಜೀನಾಮೆ ನೀಡಿದರು ಎಂಬುದನ್ನು ಉಗ್ರಪ್ಪನವರು ಹೇಳಲಿ ನೋಡುವಾ. ಅಂಥ ಹಲ್ಕಟ್ ಕೆಲಸವನ್ನೇನನ್ನೂ ಸವದಿಯವರು ಮಾಡಲಿಲ್ಲ. ಅಂದು ಅವರ ಜಾಗದಲ್ಲಿ ಯಾರೇ ಇದ್ದಿದ್ದರೂ ಅದನ್ನು ನೋಡಿರುತ್ತಿದ್ದರು. ಅವರ ಕ್ರಿಯೆ ಅಷ್ಟೊಂದು ಆಕಸ್ಮಿಕವಾಗಿತ್ತು. ಅದರಲ್ಲಿ ಯಾವ ಅಶ್ಲೀಲತೆಯಾಗಲಿ, ಅಸಭ್ಯವರ್ತನೆಯಾಗಲಿ ಇರಲಿಲ್ಲ. ಕಾಗೆ ಹಿಕ್ಕೆ ಹಾಕುವಾಗ ಅವರು ಕೆಳಗೆ ಬಂದರು. ಅವರ ಬದಲು ಬೇರೆಯವರು ಬಂದಿದ್ದರೂ ಅವರ ತಲೆ ಮೇಲೆ ಅದು ಬೀಳುತ್ತಿತ್ತು. ಅಷ್ಟೇ, ಅದಕ್ಕೂ ಅವರು ಶಿಕ್ಷೆ ಅನುಭವಿಸಿದ್ದಾರೆ. ಇದೇ ಅಪರಾಧ ಎನ್ನುವುದಾದರೆ, ಆ ಅಪರಾಧಕ್ಕೂ ಅವರು ಒಂದಕ್ಕಿಂತ ಹೆಚ್ಚು ಸಲ ಶಿಕ್ಷೆ ಅನುಭವಿಸಿದ್ದಾರೆ. ಈ ಯಾವ ಸಂಗತಿಗಳೂ ಉಗ್ರಪ್ಪನವರಿಗೆ ಗೊತ್ತಿಲ್ಲವೇ? ಗೊತ್ತಿದ್ದರೂ ಹೇಳುತ್ತಾರೆ ಅಂದ್ರೆ, ಅವರ ಮನಸ್ಸಿನಲ್ಲಿ ಬ್ಲ್ಯೂಫಿಲಂ ವಿಚಾರ ಎಷ್ಟರಮಟ್ಟಿಗೆ ಕಾಡುತ್ತಿರಬಹುದು? ಸುಖಾಸುಮ್ಮನೆ ಜನರ ಕಣ್ಣಲ್ಲಿ ಸಣ್ಣವರಾಗೋದು ಅಂದ್ರೆ ಇದು. ಈ ರೀತಿ ಉಗ್ರಪ್ಪ ಆಗಾಗ ಆಗುತ್ತಿರುವುದು ಇದೇ ಮೊದಲಲ್ಲ. ಸವದಿಯವರೇನಾದರೂ ಉಗ್ರಪ್ಪನವರಿಗೆ, ಸಿಂಘ್ವಿ, ಸುರ್ಜೇವಾಲ, ಮೇಟಿಯವರ ಪ್ರಕರಣಗಳ ಬಗ್ಗೆ ಪ್ರಶ್ನಿಸಿದರೆ, ಅವರ ಬಳಿ ಸಮರ್ಥಿಸಿಕೊಳ್ಳಲು ಯಾವ ಕಾರಣಗಳಿವೆ? ತಮ್ಮ ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ಸ್ಕೋರ್ ಸಾಧಿಸುವುದರಿಂದ, ಮತಗಳು ಬರುವುದಿಲ್ಲ. ಅದರಿಂದ ಅವರ ಪಕ್ಷಕ್ಕೆ ಲಾಭವೂ ಆಗುವುದಿಲ್ಲ. ಆದರೆ ಅಂಥ ಆರೋಪ ಮಾಡಿದವರು ಮಾತ್ರ ಸಣ್ಣವರಾಗುತ್ತಾರೆ. ಒಂದೂವರೆ ವರ್ಷಗಳ ಹಿಂದೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸವದಿಯವರು ಪರಾಭವ ಹೊಂದಿರಬಹುದು, ಆದರೆ ಬ್ಲ್ಯೂಫಿಲಂ ಹಗರಣದ ನಂತರ, ನಡೆದ ವಿಧಾನಸಭಾ ಚುನಾವಣೆಯಲ್ಲಿ(2013) ಅವರನ್ನು ಅವರ ಕ್ಷೇತ್ರದ ಜನತೆ ಆರಿಸಿದ್ದರು. ಅಂದರೆ ಅವರ ಕ್ಷೇತ್ರದ ಜನತೆಗೆ ಈ ಹಗರಣ ಪ್ರಭಾವ ಬೀರಿರಲಿಲ್ಲ ಎಂದಂತಾಯಿತಲ್ಲವೇ?

ನಾನು ಉಗ್ರಪ್ಪನವರ ಬಗ್ಗೆ ಇಷ್ಟೊಂದು ವಿವರ ಏಕೆ ಹೇಳಿದೆ ಅಂದರೆ, ನಮ್ಮ ರಾಜಕಾರಣದಲ್ಲಿ ಉಗ್ರಪ್ಪನವರಂಥ ಬಾಯಿಹರುಕರು, ವಾಚಾಳಿಗಳು, ಬಹಳ ಮಂದಿಯಿದ್ದಾರೆ. ಅವರಿಗೆ ಸಾರ್ವಜನಿಕವಾಗಿ ಹಲುಬುವುದು, ವಿಷ ಕಾರುವುದು, ಬಾಯಿ ಚಪಲಕ್ಕಾಗಿ ಲಘುವಾಗಿ ಮಾತಾಡುವುದು, ಮಾನಸಿಕ ಕಾಯಿಲೆಯಾಗಿದೆ. ಇಲ್ಲಿ ಉಗ್ರಪ್ಪ ಒಂದು ಸಂಕೇತ, ಪ್ರತಿಮೆ. ಅವರಿಗೆ ಮಾಧ್ಯಮಗಳಲ್ಲಿ ತಮ್ಮ ಹೆಸರು ಬರಬೇಕು, ಚಾಲ್ತಿಯಲ್ಲಿರಬೇಕು ಎಂಬ ಹಂಬಲ ಅಷ್ಟೇ. ಆದರೆ ತಾವು ಆ ಮೂಲಕ ಅದೆಷ್ಟು ಕುಬ್ಜರಾಗುತ್ತಿದ್ದೇವೆ ಎಂಬುದು ಗೊತ್ತಿರುವುದಿಲ್ಲ. ಎಲ್ಲಾ ಪಕ್ಷಗಳಲ್ಲೂ ಉಗ್ರಪ್ಪನವರಂಥವರು ಇದ್ದಾರೆ. ‘ಉಗ್ರಪ್ಪ ಸಂತತಿ’ ಕೇವಲ ಕಾಂಗ್ರೆಸ್ಸಿಗಷ್ಟೇ ಸೀಮಿತವಲ್ಲ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಜನಸಾಮಾನ್ಯರಿಗಂತೂ ಅದರಿಂದ ಏನೂ ಲಾಭವಿಲ್ಲ. ಲಾಭವಿರಲಿ, ಅದರಿಂದ ನಷ್ಟವೇ ಹೆಚ್ಚು. ಇದರಿಂದ ಸಾರ್ವಜನಿಕ ಸ್ವಾಸ್ಥ್ಯ ಹಾಳಾಗುತ್ತದೆ. ಅನುತ್ಪಾದಕ ಚರ್ಚೆಗಳಿಂದ ನಮ್ಮ ಸಮಾಜ ಜೀವನಕ್ಕೆ ಯಾವ ಪ್ರಯೋಜನವೂ ಆಗಲಾರದು. ಟಿವಿ ಚಾನೆಲ್‌ಗಳ ವರದಿಗಾರರು ಮೈಕ್ ಹಿಡಿದರೆ ಸಾಕು, ಕೆಲವು ರಾಜಕಾರಣಿಗಳು ಲಂಗು-ಲಗಾಮಿಲ್ಲದೇ ಮಾತಾಡುತ್ತಲೇ ಹೋಗುತ್ತಾರೆ. ತಮ್ಮ ಮಾತುಗಳಿಂದ ಜನರ ಮೇಲೆ ಎಂಥ ಪರಿಣಾಮವಾಗಬಹುದು ಎಂಬ ಬಗ್ಗೆ ಅವರು ಯೋಚಿಸುವುದಿಲ್ಲ. ಮಾತಾಡಿದರೆ ವಿಷ ಕಕ್ಕಲಾರಂಭಿಸುತ್ತಾರೆ. ಅಂಥ ಪರಮ ದ್ವೇಷವಾದರೂ ಏಕೆ? ರಾಜಕೀಯವೆಂದರೆ ಇದೇನಾ?

ಮೊನ್ನೆ ಭಾನುವಾರ ಮುಖ್ಯಮಂತ್ರಿ ಯಡಿಯೂರಪ್ಪನವರು ಬೆಂಗಳೂರಿನಲ್ಲಿ ಪ್ರದಕ್ಷಿಣೆ ಮಾಡುವುದಾಗಿ ಹೇಳಿದರು. ಅವರು ಮುಖ್ಯಮಂತ್ರಿಯಾದಂದಿನಿಂದ ನೆರೆಪೀಡಿತ ಪ್ರದೇಶಗಳಲ್ಲಿ ಮಾತ್ರ ಪ್ರವಾಸ ಮಾಡಿದ್ದರು. ಬೆಂಗಳೂರಿನ ಕಡೆ ಗಮನ ಹರಿಸಿರಲಿಲ್ಲ. ಮಳೆಯಿಂದಾಗಿ ಬೆಂಗಳೂರು ನಗರವೂ ಅಧ್ವಾನವಾಗಿದ್ದರಿಂದ, ಮುಖ್ಯಮಂತ್ರಿಯವರ ನಗರ ಪ್ರದಕ್ಷಿಣೆಗೆ ಸಹಜವಾಗಿ ಪ್ರಾಮುಖ್ಯ ಬಂದಿತ್ತು.

ಇಂಥ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಒಂದು ಕೀಟಲೆ ಮಾಡಿದರು. ‘ಮುಖ್ಯಮಂತ್ರಿ ಬಿಎಸ್‌ವೈ ಹಾಗೂ ಅವರ ಮಂತ್ರಿಗಳು ನೆರೆಯಿಂದ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ, ಬೀದಿಗೆ ಬಿದ್ದಿರುವ ಬಡ ಕುಟುಂಬಗಳೊಂದಿಗೆ ಕುಳಿತು ಪರಿಹಾರ ಕಾರ್ಯಗಳ ಪರಿಶೀಲನೆಗೆ ಮಾಡಬೇಕಾದ ಈ ಸಂದರ್ಭದಲ್ಲಿ ‘ಬೆಂಗಳೂರು ನಗರದ ಪರಿವೀಕ್ಷಣೆ’ ಎಂಬ ನಾಟಕವಾಡುತ್ತಿದ್ದಾರೆ’ ಎಂದು ಟ್ವೀಟ್ ಮಾಡಿದ್ದರು. ಇಲ್ಲಿ ಇಂಥ ಕ್ಷುಲ್ಲಕ, ಚಿಲ್ಲರೆ ರಾಜಕಾರಣ ಮಾಡಬೇಕಾದ ಅಗತ್ಯವಿತ್ತಾ? ನೆರೆಪೀಡಿತ ಪ್ರದೇಶಗಳಿಗೆ ಮಾತ್ರ ಭೇಟಿ ಕೊಟ್ಟರೆ, ‘ಬೆಂಗಳೂರಿನಲ್ಲಿ ಸಹ ಮಳೆಯಿಂದ ಹಾನಿಯಾಗಿದೆ. ಮುಖ್ಯಮಂತ್ರಿಯವರು ಬೇರೆ ಕಡೆ ಗಮನಹರಿಸುತ್ತಾರೆ’ ಎಂದು ಟೀಕಿಸುತ್ತಾರೆ. ಒಂದು ದಿನ ಬೆಂಗಳೂರು ಪ್ರದಕ್ಷಿಣೆ ಕಾರ್ಯಕ್ರಮ ಹಾಕಿಕೊಂಡರೆ, ಹೀಗೆ ಹೇಳುತ್ತಾರೆ. ಮುಖ್ಯಮಂತ್ರಿಯವರು ಬೆಂಗಳೂರು ಪರಿವೀಕ್ಷಣೆ ಮಾಡಿದರೆ ಅದರಲ್ಲಿ ನಾಟಕವೇನು ಬಂತು? ಸಿಎಂ ಅವರು ಬೆಂಗಳೂರು ನಗರದಲ್ಲಿ ಒಂದು ರೌಂಡ್ ಹಾಕಲೇಬೇಕಿತ್ತು. ಈ ಸಲದ ನೆರೆ ಸಂದರ್ಭದಲ್ಲಿ ಯಡಿಯೂರಪ್ಪನವರನ್ನು ಯಾರೂ ಟೀಕಿಸುವಂತಿಲ್ಲ. ಬೇರೆ ಬೇರೆ ಕಾರಣಗಳಿಂದ ಇಡೀ ಸರಕಾರದಲ್ಲಿ ತಾವೊಬ್ಬರೇ ಇದ್ದರೂ, ಒಂದು ದಿನವೂ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ತಿರುಗಿದರು. ಜಿಲ್ಲಾಡಳಿತದ ಜತೆ ಮಾತುಕತೆಗೆ ಕುಳಿತರು. ಇಡೀ ಸರಕಾರಿ ಆಡಳಿತಯಂತ್ರವನ್ನು ಏಕಾಂಗಿಯಾಗಿ ಚುರುಕುಗೊಳಿಸಿದರು. ಆ ಇಳಿವಯಸ್ಸಿನಲ್ಲೂ ದಣಿವನ್ನು ಲೆಕ್ಕಿಸದೇ, ಪ್ರತಿದಿನ ನೆರೆಪೀಡಿತ ಗ್ರಾಮಗಳನ್ನು ಖುದ್ದಾಗಿ ವೀಕ್ಷಿಸಿದರು. ಆದರೂ ಕುಮಾರಸ್ವಾಮಿ ಅವರಿಂದ ಕೊಂಕು ಮಾತು!

‘ಚಂದ್ರಯಾನ-2’ ವೀಕ್ಷಿಸಲು ಬೆಂಗಳೂರಿಗೆ ಬಂದ ಪ್ರಧಾನಿ ಮೋದಿ ಬಗ್ಗೆಯೂ ಕುಮಾರಸ್ವಾಮಿ ಕೊಂಕು. ‘ನೆರೆಯಿಂದ ತತ್ತರಿಸುವ ಕುಟುಂಬಗಳನ್ನು ನೋಡದೇ, ಕೇಂದ್ರದಿಂದ ಪರಿಹಾರವನ್ನೂ ಘೋಷಿಸದೇ ಹಾಗೇ ತೆರಳಿದ್ದು ನೋವಿನ ವಿಚಾರ. ಕೇಂದ್ರದಿಂದ ನೆರೆ ಪರಿಹಾರ ಕೊಡಿಸಲು ಸಾಧ್ಯವಾಗದ ದುರ್ಬಲ ಮುಖ್ಯಮಂತ್ರಿ’ ಎಂಬ ಚುಚ್ಚುಮಾತು ಬೇರೆ. ಇವೆಲ್ಲ ಕುಮಾರಸ್ವಾಮಿಯವರಿಗೆ ಶೋಭಿಸುವ ಮಾತುಗಳಾ? ‘ಕುಮಾರಸ್ವಾಮಿಯವರು ಎರಡು-ಮೂರು ದಿನ ನೆರೆಪೀಡಿತ ಪ್ರದೇಶಗಳಿಗೆ ಕಾಟಾಚಾರಕ್ಕೆ ಹೋಗಿ ಬಂದರು. ಅವರಿಗೆ ಈಗ ಬೆಂಗಳೂರಿನಲ್ಲಿ ಏನು ಕೆಲಸ? ನೆರೆಪೀಡಿತ ಪ್ರದೇಶಗಳಲ್ಲಿಯೇ ಸಂತ್ರಸ್ತರ ಜತೆ ಉಳಿಯಬಹುದಲ್ಲ?’ ಎಂದು ಕೇಳಿದರೆ, ಅದು ಎಷ್ಟು ಕ್ಷುಲ್ಲಕವೋ, ಕುಮಾರಸ್ವಾಮಿಯವರ ಮಾತುಗಳೂ.

ನಾಯಕರಾದವರು ತಮ್ಮ ಮಾತಿಗೆ ಒಂದು ಶಿಸ್ತು, ಸಂಯಮ ತಂದುಕೊಳ್ಳದಿದ್ದರೆ ಅವರ ಬಗ್ಗೆಯೇ ಅಸಹ್ಯ ಮೂಡುತ್ತದೆ. ಉಗ್ರಪ್ಪನವರು ಒಳ್ಳೆಯ ಸಂಗತಿಗಳನ್ನು ಹೇಳಿದರೂ, ಅವರ ಮಾತುಗಳನ್ನು ಯಾರೂ ಪ್ರಶಂಸಿಸುವುದಿಲ್ಲ. ‘ಹರಕುಬಾಯಿ ಉಗ್ರಪ್ಪ’ ಎಂದು ಅವರ ಪಕ್ಷದವರೇ ಲೇವಡಿ ಮಾಡುತ್ತಾರೆ. ನಾಯಕರ ಮಾತಿನಷ್ಟೇ ಅವರ ಮೌನಕ್ಕೂ ಬೆಲೆಯಿದೆ. ಆದರೆ ಅದು ಅವರಿಗೆ ಅರ್ಥವಾಗಬೇಕು. ಮಾತಾಡಿ ಮಾನಗೇಡಿಗಳಾದರು ಎಂದು ಹೇಳಿಸಿಕೊಳ್ಳುವುದಕ್ಕೆ ಹೆಚ್ಚು ಶ್ರಮಪಡಬೇಕಿಲ್ಲ. ಈ ಅಂಶವನ್ನು ರಾಜಕಾರಣಿಗಳು ಅರ್ಥಮಾಡಿಕೊಳ್ಳಲಿ. ಕಪ್ಪೆಗಳು ವಟಗುಟ್ಟುತ್ತವೆ.

Who cares?

ಸುಭಾಷಿತಗಳು ಶಿಕ್ಷಕರೂ ಹೌದು, ಸ್ನೇಹಿತರೂ ಹೌದು!

ಪ್ರಾಣೇಶ್ ಪ್ರಪಂಚ

ಗಂಗಾವತಿ ಪ್ರಾಣೇಶ್

vveditoped@gmail.com

ತುಂಬಾ ಜನ ಯುವಕರು, ನನ್ನ ಕಾರ್ಯಕ್ರಮಕ್ಕೆ ಬರುವವರು, ಕಾರ್ಯಕ್ರಮ ಮುಗಿದ ಮೇಲೆ ನನ್ನನ್ನು ಕೇಳುವ ಒಂದೇ ಒಂದು ಪ್ರಶ್ನೆ-ನಾವು ಯಾವ ಪುಸ್ತಕ ಓದಬೇಕು ಸಾರ್? ಎಲ್ಲವನ್ನೂ ಓದಬೇಕು ಎಂದು ಹೇಳಿದರೆ ಅಷ್ಟು ಸಮಯವಿಲ್ಲ ಸಾರ್, ನಾವು ನಿಮ್ಮಂತೆ ಖಾಲಿ ಇರುವವರಲ್ಲ ಎಂಬ ಅರ್ಥದ ಮಾತನಾಡುತ್ತಾರೆ, ಯಾವದಾದರೂ ಒಂದು, ಎರಡು ಪುಸ್ತಕದ ಹೆಸರು ಹೇಳಿ ಸಾರ್ ಸಾಕು ಎನ್ನುತ್ತಾರೆ. ಜೀವನ ಪರ್ಯಂತದ ಬಾಳುವೆಗೆ ಎರಡು ಪುಸ್ತಕಗಳ ಅಧ್ಯಯನ ಸಾಕೆ? ಯಾವದಾದರೂ ಜೋಕ್ಸ ಪುಸ್ತಕ ಹೇಳಿ ಸಾರ್ ಎನ್ನುತ್ತಾರೆ, ಎಲ್ಲವನ್ನು ಹಗುರವಾಗಿ ತೆಗೆದುಕೊಳ್ಳಿ ಸಾಕು ಆದರೆ, ಓದುವ ವಿಷಯಕ್ಕೆ ಸಾಕು ಎಂಬುದಿಲ್ಲ ಎಂದು ಎಷ್ಟು ಹೇಳಿದರೂ ಜನರಿಗೆ ಮನವರಿಕೆ ಆಗುವದಿಲ್ಲ. ನೀವು ಹೇಳುವ ಎಲ್ಲ ವಿಷಯವೂ ಒಂದೇ ಪುಸ್ತಕದಲ್ಲಿದೆಯಾ, ಅದು ಯಾವದು ಹೇಳಿ ಸಾರ್ ಎಂದೇ ಕೇಳುತ್ತಾರೆ.

ಸಾಕು ಎಂಬುದು ಬಂತೆಂದರೆ ಅಲ್ಲಿಗೆ ನಿಮಗೆ ಬದುಕೇ ಸಾಕಾಗಿದೆ, ನಿಮ್ಮ ಬದುಕೇ ಮುಗಿಯುತ್ತಾ ಬಂದಿದೆ ಎಂದೇ ಅರ್ಥವೆಂದು ಹೇಳಬೇಕೆನಿಸುತ್ತದೆ. ಆದರೆ, ವಿವೇಕ ಅದನ್ನು ತಡೆಯುತ್ತದೆ. ನಾವು ರಾಜಕಾರಣಿಗಳನ್ನು ಈ ವಿಷಯಕ್ಕೆ ನೋಡಿ ಕಲಿಯಬೇಕು. ಅವರು ಎಂದಾದರೂ ಅಧಿಕಾರ ಇನ್ನು ಸಾಕು ಎಂದಿದ್ದಾರೆಯೆ? ಹಣ ಆಸ್ತಿ ಮಾಡುವದನ್ನು ಸಾಕು ಎಂದಿದ್ದಾರೆಯೆ? ಬದುಕುವದು ಸಾಕು ಎಂದಿದ್ದಾರೆಯೆ? ಜನರಿಂದ ಉಗಿಸಿಕೊಳ್ಳುವದು ಸಾಕು ಎಂದವರಿಗೆ ಎನಿಸಿದೆಯೆ? ಇಂಥ ಇಳಿವಯಸ್ಸಿನಲ್ಲೂ ದೇವೇಗೌಡರು ಮತ್ತೆ ಮತ್ತೆ ನಾಲ್ಕೈದು ಕಡೆ ಎಲೆಕ್ಷನ್ನಿಗೆ ನಿಲ್ಲಲು ಸಿದ್ಧರಿದ್ದಾರೆ. ಪ್ರಧಾನಿ ಆಗಲು, ರಾಷ್ಟ್ರಪತಿ ಆಗಲು ಈ ಕ್ಷಣಕ್ಕೂ ಹತ್ತು ಜನರ ಹೆಗಲ ಮೇಲೆ ಕೈ ಹಾಕಿಕೊಂಡು ಮೆಲ್ಲಗೆ ನಡೆಯುತ್ತಲೇ ಬರುತ್ತಾರೆ.

ಸಾಕು ಎನಿಸುತ್ತಿರುವದು ಬಡವರಿಗೆ, ಮಧ್ಯಮ ವರ್ಗದವರಿಗೆ. ‘ಸಾಕು’ ಎನಿಸುವ ಎರಡು ಅಕ್ಷರಗಳ ಹಿಂದಿರುವ ಸಮಸ್ಯೆಗೆ ‘ಬದುಕು’ ಎಂಬ ಎರಡಕ್ಷರವೇ ಉತ್ತರ. ಬದುಕಿನಲ್ಲಿ ಸಾಕು ಎಂಬುದಿರಬಾರದು, ಆದರೆ, ಬದುಕು ಸಾಕಾಗಬಾರದು. ದಿನ ನಿತ್ಯದ ಏಕತಾನತೆಯ ದಿನಚರಿಯಿಂದಾಗಿಯೇ ಬಹಳಷ್ಟು ಜನರಿಗೆ ಬದುಕು ಸಾಕೆನಿಸುತ್ತದೆ. ಬೇಕಾದರೆ ಕೇಳಿ ನೋಡಿ, ಸಾಕು ಎನ್ನುವವರು, ನಿತ್ಯ ಅದೇ ಅದೇ ಮಾಡುತ್ತಿರುತ್ತಾರೆ. ವೈವಿಧ್ಯತೆ ಇದ್ದರೆ ಬದುಕು ಸಾಕೆನಿಸುವುದಿಲ್ಲ, ವರ್ಣಮಯ ದಿನಚರಿಯನ್ನು ರೂಢಿಸಿಕೊಂಡರೆ ದಿನಗಳು ಉರುಳುವದೇ ತಿಳಿಯುವದಿಲ್ಲ. ಅಂಥ ದಿನಚರಿ ನಮಗಿಲ್ಲ ಎಂಬ ಕೊರಗು ನಿಮಗಿದ್ದರೆ, ‘ಮಾಡಿದ್ದೇ ಮಾಡಬೇಕು ಸಾರ್ ಬೇರೆ ಬದುಕಿಲ್ಲ, ಹೊಳಪಿಲ್ಲ, ಹೊಸದೆಂಬುದು ಇಲ್ಲವೇ ಇಲ್ಲ’ ಎಂಬುವವರಿಗೆ ಹೇಳಿ ಮಾಡಿಸಿದ ಹವ್ಯಾಸವೆಂದರೆ ಓದುವದು.

ಎಲ್ಲವೂ ಅದರಲ್ಲಿಯೇ ಇರಬೇಕು ಎಂಬಂತಹ ‘ಆಲ್ ಇನ್ ಒನ್’ ಪುಸ್ತಕವೆಂದರೆ ಸುಭಾಷಿತಗಳು, ಗಾದೆಮಾತುಗಳು, ಕೊಟೇಶನ್‌ಗಳು. ನನಗಿಷ್ಟವಾದ ಇಂಥ ಪುಸ್ತಕಗಳೆಂದರೆ ಪ್ರಭಾಕರ ಶಾಸ್ತ್ರಿಯವರ ‘ಬೃಹತ್ ಸಂಸ್ಕೃತ ಸುಭಾಷಿತ ಭಂಡಾರ’ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಂಪಾದಿಸಿದ ‘ಸುಭಾಷಿತ ಮಂಜರೀ, ಚಾಣಕ್ಯ ಸಂಪುಟ’, ಎಸ್.ಆರ್. ರಾಮಸ್ವಾಮಿಯವರ ‘ಸೂಕ್ತಿಸಪ್ತತಿ ಸೂಕ್ತಿ-ಸಂಚಯ’, ಪ್ರೊ. ವಿಷ್ಣು ಜೋಶಿಯವರ ‘ಕಾಳಿದಾಸ ಸುಭಾಷಿತ ಹಾಗೂ ಭಾಸನ ನಲ್ನುಡಿ’, ಕೆ.ನಾರಾಯಣ ಭಟ್ಟರ ‘ನುಡಿಮುತ್ತು’, ಬಿ.ಎಂ.ಎಂ. ಆರಾಧ್ಯರ ‘ಸೂಕ್ತಿ ಮಂದಾರ ಸಂಕಲನ’, ಡಾ. ಸ್ವಾಮಿರಾವ್ ಕುಲಕರ್ಣಿಯವರ ಸಂಗ್ರಹಿತ ‘ಹರಿದಾಸರ ನುಡಿ ಹಣತೆ’, ಸಿ.ಪಿ.ಕೆಯವರ ‘ಅಂತರತಮ’, ಮಹಾಬಲ ಸೀತಾಳಭಾವಿಯವರ ‘ನಿತ್ಯ ಜೀವನಕ್ಕೆ ಹತ್ತಿರದ ಸುಭಾಷಿತಗಳು’, ಗೌರಿಸುತರು ಸಂಪಾದಿಸಿದ ‘1200 ನುಡಿರತ್ನಗಳು’, ಭರ್ತೃಹರಿಯ ‘ಶತಕ ತ್ರಯ’, ಪರಮೇಶ್ವರ ಭಟ್ಟರ ‘ಇಂದ್ರಚಾಪ’, ಶ್ರೀಪಾದ ಆರ್. ಕುಲಕರ್ಣಿಯವರ ‘ಸುಖದ ಅನ್ವೇಷಣೆ’ ಅಲ್ಲದೇ ರಾಷ್ಟ್ರೋತ್ಥಾನದ ಪ್ರಕಟಣೆಗಳಾದ ‘ಜೀವನ ಮೌಲ್ಯಗಳು ಭಾಗ ಒಂದು, ಎರಡು, ಮೂರು’. ಇನ್ನು ಅಲ್ಲಮನ ‘ವಚನ ಸುಧೆ, ಸರ್ವಜ್ಞನ ಪದಗಳು, ಬಸವಣ್ಣನವರ ವಚನಗಳು,’ ಹೀಗೆ ಓದಬೇಕೆನ್ನುವವರಿಗೆ ಸಾಲು ಸಾಲು ಪುಸ್ತಕಗಳಿವೆ.

ಮೇಲ್ಕಂಡ ಈ ಮಹಾನುಭಾವರೆಲ್ಲ ತಾವು ಓದಿದ ಗ್ರಂಥಗಳಿಂದ ಆಯ್ದ ನುಡಿ ಮುತ್ತುಗಳನ್ನು, ‘ಎಲ್ಲಾ ಇರುವ ಒಂದು ಪುಸ್ತಕ ಯಾವದಾದರೂ ಇದ್ದರೆ ಹೇಳಿ ಸಾರ್’ ಎಂಬ ನಮ್ಮಂಥ ಸೋಮಾರಿಗಳಿಗಾಗಿಯೇ ಸಂಗ್ರಹಿಸಿ ಬರೆದಿದ್ದಾರೆ, ಇವನ್ನಾದರೂ ಓದಿ ಎಲ್ಲವುಗಳ ಮಿಶ್ರಣದ ಭೇಲ್‌ಪುರಿಯನ್ನು ಸವಿಯೋಣ. ನಾನಂತೂ ಮೊದಲಿನಿಂದ ಸುಭಾಷಿತಗಳ ಪ್ರಿಯ, ಪಿಯುಸಿ ಓದುತ್ತಿದ್ದಾಗಲೇ ನನ್ನ ಹದಿನೇಳನೆ ವಯಸ್ಸಲ್ಲಿ ಕನ್ನಡದಲ್ಲಿದ್ದ ‘ಮನುಸ್ಮೃತಿ ಓದಿದ್ದೆ, ಅಲ್ಲಿಂದ ನನಗೆ ಗಾದೆ ಮಾತುಗಳ, ನಾಣ್ಣುಡಿಗಳ, ಸುಭಾಷಿತಗಳ ರುಚಿ ಹತ್ತಿತ್ತು. ಕೇವಲ ನಾಲ್ಕು ಸಾಲುಗಳ ಸುಭಾಷಿತಗಳು ನೂರಾರು ವರ್ಷಗಳ ಅನುಭವಗಳನ್ನು ಕಟ್ಟಿಕೊಡುತ್ತವೆ. ಬೇರೆಯವರ ಅನುಭವಗಳನ್ನೂ ನಮ್ಮದಾಗಿಸುತ್ತವೆ.

ಇಂದಿನ ಪಾಲಕರು, ಮಕ್ಕಳು, ರ‍್ಯಾಂಕ್-ಅಂಕಗಳ ಹಿಂದೆ ಬಿದ್ದು ಜೀವನದ ಸ್ವಾರಸ್ಯವನ್ನೇ ಕಳೆದುಕೊಳ್ಳುತ್ತಿದ್ದಾರೆ. ಇನ್ನು ಹಿರಿಯರು ಹಾಳು ಕಾಡುಹರಟೆಗಳಿಗೆ, ರಾಜಕೀಯ ಸುದ್ದಿಗಳಿಗೆ ಮನಸೋತು ಕುಳಿತಲ್ಲಿಯೇ ಮೈಮನಗಳನ್ನು ಭಾರವಾಗಿಸಿಕೊಳ್ಳುತ್ತಿದ್ದಾರೆ- ಇದಕ್ಕೂ ಒಂದು ಸುಭಾಷಿತದ ಮೂಲಕವೇ ಚಾಟಿ ಏಟು ಬೀಸಿದ್ದಾರೆ ಸುಭಾಷಿತಕಾರರು! ಅದೆಂದರೆ ‘ಬೊಗಳೆ ಮಾತುಗಳನ್ನಾಡುವದಕ್ಕಿಂತ ಮನುಜ ತನ್ನ ಸದ್ಗುಣಗಳನ್ನು ಅಭಿವೃದ್ಧಿ ಮಾಡಿಕೊಳ್ಳಬೇಕು, ಆಕಳು ಹಾಲನ್ನು ಹೆಚ್ಚು ಕೊಡುವದರಿಂದ ಕಾಮಧೇನು ಎನಿಸಿಕೊಳ್ಳುತ್ತದೆಯಾಗಲಿ ಕೊರಳಲ್ಲಿ ಕಟ್ಟಿಸಿಕೊಂಡಿರುವ ದೊಡ್ಡ ದೊಡ್ಡ ಗಂಟೆಗಳ ಸದ್ದಿನಿಂದಲ್ಲ’. ಇದು ರಾಜಕಾರಣಿಗಳಿಗೆ ಹೇಳಿ ಮಾಡಿಸಿದ ಮಾತು, ‘ಸತತ ನಾಲ್ಕು ಬಾರಿ ಕ್ಷೇತ್ರದಿಂದ ಗೆದ್ದವನು, ಹ್ಯಾಟ್ರಿಕ್ ಹೀರೋ, ಸೋಲಿಲ್ಲದ ಸರದಾರ,’ ಎಂಬ ಬಿರುದುಗಳನ್ನು ಪತ್ರಿಕೆಗಳಲ್ಲಿ ಬರೆಸಿಕೊಳ್ಳುವ, ತಮ್ಮದೇ ಕೃಪಾಪೋಷಿತ ಚಾನಲ್‌ಗಳಲ್ಲಿ ಹೇಳಿಸಿಕೊಳ್ಳುವ ರಾಜಕೀಯ ನಾಯಕರು ಕ್ಷೇತ್ರಕ್ಕೆ ಸೇವೆ, ಅಭಿವೃದ್ಧಿ ಎಂಬ ಹಾಲು ಕೊಡದೇ, ‘ಬಾರಿ ಬಾರಿಗೆ ಆರಿಸಿ ಬರುತ್ತೇವೆ’ ಎಂಬ ಗಂಟೆಗಳನ್ನೇ ಕಟ್ಟಿಕೊಂಡು ಅವನ್ನೇ ಶಬ್ದ ಮಾಡುತ್ತಾ ಅಡ್ಡಾಡಿದಂತೆ.

ಪ್ರೈಮರಿ, ಹೈಸ್ಕೂಲ್ ಶಿಕ್ಷಣದಿಂದಲೇ ಮಕ್ಕಳಿಗೆ ಸುಭಾಷಿತಗಳ ರುಚಿ ಹಚ್ಚಿಸಬೇಕು. ಶಾಲಾದಿನಗಳಲ್ಲಿ ಮಕ್ಕಳಿಗೆ ತುಂಬಾ ಕೀಳರಿಮೆ ಇರುತ್ತದೆ. ತಮಗೆ ಬಟ್ಟೆ ಸರಿಯಿಲ್ಲವೆಂದೋ ಕೆಲವು ವಿಷಯಗಳು ತಲೆಗೆ ಹೋಗವದಿಲ್ಲವೆಂದೋ, ಮಾರ್ಕ್ಸ ಕಮ್ಮಿ ಬಂತೆಂದೋ ಯೋಚಿಸುತ್ತಾ, ಯೋಚಿಸುತ್ತಾ ನಾನು ದುರ್ಬಲ, ದಡ್ಡ ಎಂಬ ಭಾವನೆ ಬಂತೆಂದರೆ ಅವನ ಏಳಿಗೆ ಕಷ್ಟ, ಆಗ ಅವನಿಗೆ ಈ ಸುಭಾಷಿತವು ಔಷಧದಂತೆ ಕೆಲಸ ಮಾಡುತ್ತದೆ: ಅದೆಂದರೆ, ‘ನಾನು ತುಂಬಾ ಕಡಿಮೆ ಇದ್ದೇನೆ, ಕೆಳಗಿದ್ದೇನೆ ಎಂದು ದುಃಖಿಸಬಾರದು. ಅದರ ಬದಲಿಗೆ ಇತರರಲ್ಲಿನ ಸದ್ಗುಣಗಳನ್ನು, ಲಲಿತ ಕಲೆಗಳಾದ ಹಾಡುವಿಕೆ, ಚಿತ್ರ ಬಿಡಿಸುವಿಕೆ, ಭಾಷಣ, ಅಭಿನಯಗಳನ್ನು ಬೆಳೆಸಿಕೊಂಡರೆ, ನೂರಾರು ಅಡಿ ಒಳಗಿರುವ ಬಾವಿಯ ಸಿಹಿ ನೀರನ್ನು ಜನರು ಹಗ್ಗ ಹಾಕಿ ಎಳೆದುಕೊಂಡು ಪಾತ್ರೆಗಳಲ್ಲಿ ತುಂಬಿಸಿಕೊಂಡು ಕುಡಿಯುವಂತೆ ನಿನ್ನನ್ನು ಬಳಸುತ್ತಾರೆ’. ಈ ಮಾತಿನಿಂದ ದಡ್ಡ ಹುಡುಗನಲ್ಲಿ ಆಶಾಕಿರಣ ಮೂಡಿ ಅವನು ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತಾನೆ.

ಈಗಿನ ಮಕ್ಕಳು ಗೂಗಲ್, ವಾಟ್ಸಪ್, ನೆಟ್, ಫೇಸ್ ಬುಕ್, ಇತ್ಯಾದಿಗಳಿಗೆ ಅಡಿಕ್ಟ್ ಆಗಿ ಕೂತಲ್ಲೇ ಆಯುಷ್ಯ ಕಳೆದುಕೊಳ್ಳುತ್ತಿವೆ. ಸ್ನೇಹಿತರಂತೂ ಇಲ್ಲವೇ ಇಲ್ಲ, ಪ್ರವಾಸ, ತಿರುಗಾಟ, ಕುತೂಹಲಗಳು ಉಳಿದೇ ಇಲ್ಲ, ಬಿದ್ದಲ್ಲಿಯೇ ಕೊರಡಿನಂತೆ ಬಿದ್ದು, ಕೂತಲ್ಲಿಯೇ ಕಲಿಯುತ್ತಾ, ಊರಿನ ದಾರಿ ತೋರಿಸುವ ಕೈ ಮರದಂತೆ ಇದ್ದಲ್ಲಿಯೇ ಇದ್ದಾರೆ. ಅವರಿಗೆ ಈ ಸುಭಾಷಿತ ಚಾಟಿ ಏಟಿನಂತಿದೆ: ‘ಪ್ರವಾಸ ಮಾಡದ ಮನುಷ್ಯ, ಪಂಡಿತರ ಜೊತೆ ಚರ್ಚಿಸದ ಮನುಷ್ಯ, ಸ್ನೇಹಿತರೇ ಇಲ್ಲದ ಮನುಷ್ಯ ನೀರಿನ ಮೇಲಿನ ತುಪ್ಪದಂತೆ ಇದ್ದಲ್ಲಿಯೇ ಇರುತ್ತಾನೆ. ಇವುಗಳನ್ನು ಮಾಡುವ ಮನುಷ್ಯ ಅಂದರೆ ಊರೂರು ಸುತ್ತುವದು, ಸಮಾನ ಮನಸ್ಕರು, ಹಿರಿಯರ ಜೊತೆ ಚರ್ಚಿಸುವವನು. ಸ್ನೇಹಿತರ ಗುಂಪಿಗೆ ನಾಯಕನಾಗಿರುವವನು ನೀರಿನ ಮೇಲಿನ ಎಣ್ಣೆಯಂತೆ ನೀರಿನ ತುಂಬಾ ಪಸರಿಸುತ್ತಾನೆ.’

ಸಜ್ಜನರ ಲಕ್ಷಣವೆಂದರೆ ಯಾರ ಟೀಕೆಗೂ ಅಂಜದೆ, ಅಳುಕದೆ, ಒಮ್ಮೊಮ್ಮೆ ಕಿವಿಯ ಮೇಲೆ ಹಾಕಿಕೊಳ್ಳದೆ ಸದಾ ಒಳ್ಳೆಯದನ್ನೇ ಮಾಡುತ್ತಿರುತ್ತಾರೆ. ಸದ್ಯದ ಉದಾಹರಣೆ ಎಂದರೆ ಪ್ರಧಾನಿ ಮೋದಿ. ಇದಕ್ಕೆ ಅನ್ವಯವಾಗುವ ಸುಭಾಷಿತವೆಂದರೆ ‘ಸಮುದ್ರದ ಉಪ್ಪು ನೀರನ್ನೇ ಮೋಡಗಳು ಹೀರಿಕೊಂಡು ಕುಡಿದರೂ ಮತ್ತೆ ಮಳೆಯ ಮೂಲಕ ಸಿಹಿ ನೀರನ್ನೇ ಜನರಿಗೆ ಕೊಡುತ್ತವೆ. ಸತ್ಪುರುಷರು ಯಾರ ಟೀಕೆಗೂ ಅಂಜುವದಿಲ್ಲ ಸಮುದ್ರದ ನೀರನ್ನು ಹುಲ್ಲು, ಬೆರಣಿ, ಕಟ್ಟಿಗೆಯಿಂದ ಬಿಸಿ ನೀರನ್ನಾಗಿ ಮಾಡಲು ಸಾಧ್ಯವೇ ಇಲ್ಲ.’

ಇನ್ನು ಹೇರಳ ಹಣವಿದ್ದವರಿಗೆ ಅದನ್ನು ಅನುಭವಿಸಲು ಗೊತ್ತಿರುವದಿಲ್ಲ, ಅವರಿಗೇ ಅನುಭವಿಸುವದು ಗೊತ್ತಿಲ್ಲವೆಂದರೆ ಸದ್ವಿನಿಯೋಗವಂತೂ ಗೊತ್ತೇ ಇಲ್ಲ ಅಂಥವರಿಗಾಗಿ ಈ ಸುಭಾಷಿತ ಅದ್ಭುತ ಚಿತ್ರವನ್ನು ಕಣ್ಮುಂದೆ ಕಟ್ಟಿಕೊಡುತ್ತದೆ. ಅದೆಂದರೆ ‘ನಾಯಿ, ಕುತ್ತಿಗೆ ಮಟ್ಟದ ನೀರಿನಲ್ಲಿ ಮುಳುಗಿದ್ದರೂ ನೀರನ್ನು ನಾಲಗೆಯಿಂದಲೇ ನೆಕ್ಕುತ್ತಿರುತ್ತದೆ, ಗಟ ಗಟನೆ ಕುಡಿಯುವ ಅಭ್ಯಾಸ ಅದಕ್ಕೆ ಗೊತ್ತೇ ಇಲ್ಲ’. ಹಣವಿದ್ದವರು ಹೇಗಿರಬೇಕೆಂಬುದಕ್ಕೆ ನಮ್ಮ ಕಣ್ಮುಂದಿರುವ ಇನ್ಫೋಸಿಸ್‌ನ ಸುಧಾ-ನಾರಾಯಣ ಮೂರ್ತಿ ದಂಪತಿ ಶ್ರೇಷ್ಠ ನಿದರ್ಶನ. ಇವರ ಮೈ ಮೇಲೆ ಬಂಗಾರವೇ ಇಲ್ಲ, ಶಾಪಿಂಗ್ ಮಾಡುವದೇ ಇಲ್ಲ, ಆದರೆ, ಬರಗಾಲ ನಿಧಿಗೆ, ಯೋಧರ ನಿಧಿಗೆ, ಶಾಲೆ ಕಾಲೇಜುಗಳಿಗೆ ಹೇರಳವಾಗಿ ದಾನ ಮಾಡುತ್ತಾರೆ, ಮುಂದಿನ ಜನ್ಮಕ್ಕೆ ಅವರು ಹಣ ಕೂಡಿಡುತ್ತಿಲ್ಲ, ಪುಣ್ಯವನ್ನೇ ಕೂಡಿಟ್ಟುಕೊಳ್ಳುತ್ತಿದ್ದಾರೆ, ಪುಣ್ಯವೊಂದಿದ್ದರೆ, ಪುಣ್ಯವೊಂದನ್ನು ಗಳಿಸಿದರೆ ಮಂತ್ರಿಗಿರಿಯಷ್ಟೇ ಏಕೆ, ಇಂದ್ರ ಪದವಿಯೂ ನಮಗಾಗಿ ಕಾಯುತ್ತಿರುತ್ತದೆ. ಈ ಸತ್ಯ ಬಹಳ ಜನರಿಗೆ ಅರಿವಾಗುವದೇ ಇಲ್ಲ, ಅದಕ್ಕೆ ಸುಧಾಮೂರ್ತಿಯಂಥವರನ್ನು ಕುರಿತಂತೇ ಇರುವ ಈ ಸುಭಾಷಿತವನ್ನು ಮಕ್ಕಳಿಗೆ ಬಾಲ್ಯದಲ್ಲೇ ಹೇಳಬೇಕು-‘ಬುದ್ಧಿ ಇಲ್ಲದ ಪಶುಗಳೂ ಸಹ ತಮ್ಮ ಹಾಲನ್ನು ಕರುಗಳಿಗೆ ಕುಡಿಸಿದ ಮೇಲೆ ಉಳಿದದ್ದನ್ನು ಜನರಿಗೆ, ದೇವರ ಅಭಿಷೇಕಕ್ಕೆ, ರೋಗಿಗಳಿಗಾಗಿ ಕೊಡುತ್ತವೆ. ಹೇರಳ ಸಂಪತ್ತಿರುವ ಶ್ರೀಮಂತರು ಗಳಿಸಿದ ಸಂಪತ್ತನ್ನು ಬರೀ ತಮ್ಮ ಮಕ್ಕಳಿಗೇ ವಿನಿಯೋಗಿಸಿದರೆ, ಕೂಡಿಟ್ಟರೆ ಅದರ ಪಾಪವನ್ನೂ ಅವರ ಸಂತಾನ ಭರಿಸಬೇಕಾಗುತ್ತದೆ.

ಅಧರ್ಮ ಇದ್ದಷ್ಟು ಕಾಲ ಮೆರೆಯುತ್ತದೆ ನಿಜ, ಆದರೆ, ಶಾಶ್ವತ ಉಳಿಯುವದಿಲ್ಲ; ಹಸು ಒಂದು ಸಲಕ್ಕೆ ಒಂದೇ ಮರಿ ಹಾಕುತ್ತದೆ. ಅದೇ ಹುಲಿ, ಸಿಂಹಗಳು, ಒಂದು ಸಲಕ್ಕೆ ನಾಲ್ಕೈದು ಮರಿಗಳನ್ನು ಹಾಕುತ್ತವೆ. ಆದರೂ, ಭೂಮಿಯ ಮೇಲೆ ಹಸುಗಳೇ ಹೆಚ್ಚಿವೆ. ಕಾರಣ, ಧರ್ಮ ಸಂತಾನಕ್ಕೆ ಉಳಿವು ಹೆಚ್ಚು. ಕ್ರೂರಿ, ಪೀಡಕ, ದರ್ಪಗಳ ಸಂತಾನ ಸಾವಿರಗಟ್ಟಲೇ ಇದ್ದರೂ ಸರ್ವನಾಶ ಖಂಡಿತ. ಕೌರವರು ನೂರು ಜನ, ಒಬ್ಬರೂ ಉಳಿಯಲಿಲ್ಲ, ಅವರ ಹೆಸರನ್ನು ಯಾರಿಗೂ ಇಡಲು ಜನ ತಯಾರಿಲ್ಲ. ಆದರೆ ಪಾಂಡವರು ಕೇವಲ ಐದೇ ಜನ, ಸೂರ್ಯ ಚಂದ್ರರಿರುವರೆಗೂ ಉಳಿದು ಹೋದರು.

ಸಜ್ಜನರಾದವರು ಎಂದಿಗೂ ತಮ್ಮ ಮೂಲ ಸ್ವಭಾವಗಳನ್ನು ಎಂಥ ಕಷ್ಟ ಬಂದರೂ ಬಿಡುವದಿಲ್ಲ, ದೇಹ ಬಿಡುತ್ತಾರಾಗಲಿ, ‘ದೇಹಿ’ ಎನ್ನುವದಿಲ್ಲ. ಅದನ್ನು ಈ ಸುಭಾಷಿತವು ಎಷ್ಟು ಮಾರ್ಮಿಕವಾಗಿ ಹೇಳುತ್ತದೆಯೆಂದರೆ, ‘ಕೆಟ್ಟ ಕಾಲ ಬಂದರೂ ಸಜ್ಜನರು ತಮ್ಮ ನೀತಿ ಪಥಗಳಿಂದ ಹಿಂದೆ ಸರಿಯುವದಿಲ್ಲ. ಹೇಗೆ ಸೂರ್ಯನ ತಾಪದಿಂದ ಹಿಮಗಡ್ಡೆಯು ತನ್ನ ಆಕಾರವನ್ನು ಕಳೆದುಕೊಂಡು ನೀರಾದರೂ, ಆ ನೀರಿನಲ್ಲೂ ತನ್ನ ತಂಪನ್ನು ಉಳಿಸಿಕೊಂಡಿರುತ್ತದೆಯೋ ಹಾಗೆ ಒಳ್ಳೆಯ ನಡೆವಳಿಕೆಯನ್ನೇ ಹೊಂದಿರುತ್ತಾರೆ. ಎಷ್ಟು ಅದ್ಭುತ ನುಡಿಯಲ್ಲವೆ?

ಅದಕ್ಕೇ ನಾನು ಯಾವದಾದರೂ ಒಂದು ಪುಸ್ತಕ ಓದಿದರೆ ಎಲ್ಲ ಪುಸ್ತಕಗಳನ್ನು ಓದಿದಂತಾಗುತ್ತದೆಯೋ ಅಂಥ ಪುಸ್ತಕದ ಹೆಸರು ಹೇಳಿ ಎಂದರೆ ಸುಭಾಷಿತಗಳ ಪುಸ್ತಕ ಓದಿ ಎನ್ನುತ್ತೇನೆ. ಅದೊಂದೇ ನಿಮಗೆ ಎಲ್ಲವನ್ನೂ ಓದುವ ಅಭ್ಯಾಸ ಮೂಡಿಸುತ್ತದೆ. ಸುಭಾಷಿತಗಳು ಬರಿ ನುಡಿಗಟ್ಟುಗಳಲ್ಲ, ಅವು ಶಿಕ್ಷಕರೂ ಹೌದು, ಸನ್ಮಾರ್ಗದಲ್ಲಿ ನಡೆಸುವ ಸ್ನೇಹಿತರೂ ಹೌದು.